ಕರ್ನಾಟಕ ಸರ್ಕಾರ  ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.79/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಡಾಃಕೋನಿಕಾ** | | |
| **ಗಂಡನ ಹೆಸರು** | **ನಾಗರಾಜ್ ಕಾಟ್ವಾ** | **ಪಿಡಬ್ಲೂಃ** | **8** |
| **ವಯಸ್ಸುಃ** | **39 ವರ್ಷ** | **ಸಿಡಬ್ಲೂಃ** | **12** |
| **ಉದ್ಯೋಗಃ** | **ವೈದ್ಯಾಧಿಕಾರಿ** | | |
| **ವಾಸ ಸ್ಥಳಃ** | **ತಾಲ್ಲೂಕು ಆಸ್ಪತ್ರೆ, ಸಿಂಧನೂರು.** | | |

**ದಿನಾಂಕ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 3, 4 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ನಾನು ಡಿಸೆಂಬರ್ 2014 ಇಲ್ಲಿಯವರೆಗೂ ನಾನು ಸಿಂಧನೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಳಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ04.11.2022 ರಂದು ಹುಸೇನಪ್ಪ ತಂದೆ ಅಮರಪ್ಪ ಎಂಬುವವರು ಸೋಮಲಾಪುರದಲ್ಲಿ ಮಧ್ಯಾಹ್ನ 12-10 ಕ್ಕೆ ಆದ ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಹತ್ತಿರ ಚಿಕಿತ್ಸೆಗೆಂದು ಬಂದಿದ್ದರು. ಸದರಿಯವರನ್ನು ನಾನು ಪರೀಕ್ಷೆ ಮಾಡಿರುತ್ತೇನೆ. ಸದರಿ ಗಾಯಾಳುವನ್ನು ನಾನು ಪರೀಕ್ಷೆ ಮಾಡಿದಾಗ ಎದೆಯ ಹತ್ತಿರ & ಎಡಗಣ್ಣಿನ ಕೆಳಗೆ ಚೂರಿದ ಗಾಯಗಳು ಆಗಿದ್ದವು. ಸದರಿ ಗಾಯ ಸಾಮಾನ್ಯ ಸ್ವರೂಪದ ಗಾಯ ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ

ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿ.ಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ)ಎಂದು ಗುರುತಿಸಲಾಯಿತು.

ದಿನಾಂಕಃ04.11.2022 ರಂದು ಲಕ್ಷ್ಮೀ ಗಂಡ ಯಂಕೋಬ ಎಂಬುವವರು ಸೋಮಲಾಪುರದಲ್ಲಿ ಮಧ್ಯಾಹ್ನ 12-10 ಕ್ಕೆ ಆದ ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಹತ್ತಿರ ಚಿಕಿತ್ಸೆಗೆಂದು ಬಂದಿದ್ದರು. ಸದರಿಯವರನ್ನು ನಾನು ಪರೀಕ್ಷೆ ಮಾಡಿರುತ್ತೇನೆ. ಸದರಿ ಗಾಯಾಳುವನ್ನು ನಾನು ಪರೀಕ್ಷೆ ಮಾಡಿದಾಗ ಅವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿ.ಪಿ.5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ)ಎಂದು ಗುರುತಿಸಲಾಯಿತು.

ದಿನಾಂಕಃ04.11.2022 ರಂದು ಪದ್ದಮ್ಮ ಗಂಡ ಹುಸೇನಪ್ಪ ಎಂಬುವವರು ಸೋಮಲಾಪುರದಲ್ಲಿ ಮಧ್ಯಾಹ್ನ 12-10 ಕ್ಕೆ ಆದ ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಹತ್ತಿರ ಚಿಕಿತ್ಸೆಗೆಂದು ಮ.2-45 ಕ್ಕೆ ಬಂದಿದ್ದರು. ಸದರಿ ಗಾಯಾಳುವನ್ನು ನಾನು ಪರೀಕ್ಷೆ ಮಾಡಿದಾಗ ಅವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿ.ಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ)ಎಂದು ಗುರುತಿಸಲಾಯಿತು.

ದಿನಾಂಕಃ04.11.2022 ರಂದು ಯಂಕೋಬಣ್ಣ ತಂದೆ ಪಕೀರಪ್ಪ ಎಂಬುವವರು ಸೋಮಲಾಪುರದಲ್ಲಿ ಮಧ್ಯಾಹ್ನ 12-10 ಕ್ಕೆ ಆದ ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಹತ್ತಿರ ಚಿಕಿತ್ಸೆಗೆಂದು ಮ.2-40 ಕ್ಕೆ ಬಂದಿದ್ದರು. ಸದರಿ ಗಾಯಾಳುವನ್ನು ನಾನು ಪರೀಕ್ಷೆ ಮಾಡಿದಾಗ ಅವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿ.ಪಿ.7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಎ)ಎಂದು ಗುರುತಿಸಲಾಯಿತು.

ದಿನಾಂಕಃ04.11.2022 ರಂದು ಹನುಮಂತ ತಂದೆ ಅಮರಪ್ಪ ಎಂಬುವವರು ಸೋಮಲಾಪುರದಲ್ಲಿ ಮಧ್ಯಾಹ್ನ 12-10 ಕ್ಕೆ ಆದ ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಹತ್ತಿರ ಚಿಕಿತ್ಸೆಗೆಂದು ಮ.2-30 ಕ್ಕೆ ಬಂದಿದ್ದರು. ಸದರಿ ಗಾಯಾಳುವನ್ನು ನಾನು ಪರೀಕ್ಷೆ ಮಾಡಿದಾಗ ಅವರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು,

ಗಾಯದ ಪ್ರಮಾಣಪತ್ರವನ್ನು ನಿ.ಪಿ.೮ ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.೮(ಎ)ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1. ಸಣ್ಣ ಮಕ್ಕಳು ಅಥವಾ ಸಾಕಿದ ಸಣ್ಣ ಬೆಕ್ಕು, ನಾಯಿಗಳು ಪರಚಿದಾಗ ಸಹ ಗಾಯಗಳಾಗುತ್ತವೆ ಎಂದರೆ ಸರಿ. ನೀವು ಯಾವುದೇ ಗಾಯಾಳುಗಳನ್ನು ಪರೀಕ್ಷಿಸಿಲ್ಲ ಎಂದರೆ ಸರಿಯಲ್ಲ. ನೀವು ತನಿಖಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಗಾಯದ ಪ್ರ.ಪತ್ರಗಳನ್ನು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**